## ಕರ್ನಾಟಕ ಸರ್ಕಾರ

ನಂ.ಗ್ರಾಅಪ/308/ಗ್ರಾಪಂಅ/2011

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 09-11-2011

## ಸುತ್ತೋಲೆ

ವಿಷಯ: ಹೊಸದಾಗಿ ಪಡಿತರ ಚೀಟಿ ನೀಡುವ ಜವಾಬ್ದಾರಿಯನ್ನು ಗ್ರಾಮ ಪಂಚಾಯಿತಿಗಳಿಗೆ ವಹಿಸುವ ಬಗ್ಗೆ.

ಉಲ್ಲೇಖ: ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಕಡತ ಸಂಖ್ಯೆ: ಆನಾಸ 298 ಇಭತ 2011.

---

ಈ ಹಿಂದೆ ಪಡಿತರ ಚೀಟಿಗಳನ್ನು ನೀಡುವ ಜವಾಬ್ದಾರಿಯನ್ನು ಖಾಸಗಿ ಸಂಸ್ಥೆಗೆ ವಹಿಸಲಾಗಿತ್ತು. ಆದರೆ ಈ ವ್ಯವಸ್ಥೆಯು ಸಮರ್ಪಕವಾಗಿ ನಡೆಯದೆ, ಅಧಿಕ ಸಂಖ್ಯೆಯಲ್ಲಿ ಅನರ್ಹ ಪಡಿತರ ಚೀಟಿಗಳು ನೀಡಲ್ಪಟ್ಟು, ಬಹಳ ಸಂಖ್ಯೆಯಲ್ಲಿ ಅರ್ಹ ಕುಟುಂಬಗಳು ಪಡಿತರ ವ್ಯವಸ್ಥೆಯಿಂದ ವಂಚಿತರಾಗಿರುವುದನ್ನು ಗಮನಿಸಲಾಗಿದೆ. ಆದುದರಿಂದ ಇನ್ನು ಮುಂದೆ ಗ್ರಾಮೀಣ ಪ್ರದೇಶಗಳಲ್ಲಿ ಪಡಿತರ ಚೀಟಿ ಬಯಸುವ ಕುಟುಂಬಗಳ ಅಗತ್ಯ ಮಾಹಿತಿಯನ್ನು ``ಪಂಚತಂತ್ರ`` ಕಂಪ್ಯೂಟರ್ ವ್ಯವಸ್ಥೆ ಮೂಲಕ ಸಂಸ್ಕರಿಸುವ ಜವಾಬ್ದಾರಿಯನ್ನು ಸಂಬಂಧಿಸಿದ ಪಂಚಾಯಿತಿಗಳಿಗೆ ವಹಿಸಲು ನಿರ್ಧರಿಸಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದು, ಪಡಿತರ ಚೀಟಿ ಬಯಸುವವರ ಮಾಹಿತಿಯನ್ನು ಪಂಚಾಯಿತಿ ಕಛೇರಿಗಳಲ್ಲಿ ಇರುವ ಕಂಪ್ಯೂಟರ್ ವ್ಯವಸ್ಥೆ ಬಳಸಿ ಸಂಸ್ಕರಿಸುವ ಜವಾಬ್ದಾರಿಯನ್ನು ರಾಜ್ಯದ 5627 ಗ್ರಾಮ ಪಂಚಾಯಿತಿಗಳಿಗೆ ವಹಿಸಿದಲ್ಲಿ, ವ್ಯವಸ್ಥೆಯಲ್ಲಿ ಪಾರದರ್ಶಕತೆ, ನಿಖರತೆ, ಸಾಮಾಜಿಕ ನ್ಯಾಯಗಳು ಮತ್ತು ಮುಖ್ಯವಾಗಿ ಅರ್ಹ ಕುಟುಂಬಗಳು ಪಡಿತರ ಚೀಟಿ ಪಡೆಯುವಲ್ಲಿ ಇರುವ ತೊಂದರೆಗಳನ್ನು ನಿವಾರಿಸಬಹುದಾಗಿರುತ್ತದೆ ಎಂದು ಪರಿಗಣಿಸಲಾಗಿದೆ.

ಈ ಮೇಲಿನ ಕಾರಣಗಳಿಗಾಗಿ, ಗ್ರಾಮ ಪಂಚಾಯಿತಿಗಳಿಗೆ ಈ ಕೆಳಗಿನ ಜವಾಬ್ದಾರಿಗಳನ್ನು ವಹಿಸಲು ನಿರ್ಧರಿಸಲಾಗಿದೆ.

1. ಹೊಸದಾಗಿ ಪಡಿತರ ಚೀಟಿ ಬಯಸುವ ಕುಟುಂಬದ ಸದಸ್ಯರ ಮಾಹಿತಿಗಳನ್ನು ``ಪಂಚ ತಂತ್ರ`` ಕ್ಕೆ ದಾಖಲಿಸುವುದು;
2. ಗ್ರಾಮೀಣ ಪ್ರದೇಶಗಳ ಕುಟುಂಬಗಳ ಆರ್ಥಿಕ ಸ್ಥಿತಿಯನ್ನು ನಿರ್ಧರಿಸಿ ಅಂತ್ಯೋದಯ ಅನ್ನ ಯೋಜನೆ (ಎಎವೈ), ಬಿಪಿಲ್ ಮತ್ತು ಎಪಿಲ್ ವರ್ಗೀಕರಣವನ್ನು ಕಂಪ್ಯೂಟರ್ಗೆ ದಾಖಲಿಸುವುದು;
3. ಅನರ್ಹ ಪಡಿತರ ಚೀಟಿಗಳನ್ನು ಗುರುತಿಸುವುದು;
4. ಪಡಿತರ ಚೀಟಿ ಹೊಂದಿದವರ ಕೃಷಿ ಜಮೀನು ಹಿಡುವಳಿಯ ಮಾಹಿತಿ ದಾಖಲಿಸುವುದು; ಮತ್ತು
5. ಫಲಾನುಭವಿಗಳ ಕುಟುಂಬದ ಸದಸ್ಯರ ಹೆಸರು ಇತ್ಯಾದಿ ಮಾಹಿತಿ ಸೇರಿಸುವುದು/ಕಡಿಮೆ ಮಾಡುವುದು.

ಯಾವುದೇ ಒಂದು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಇರುವ ಒಂದು ಕುಟುಂಬವು ಪಡಿತರ ಚೀಟಿ ಹೊಂದದೆ ಇದ್ದು, ಅದನ್ನು ಪಡೆಯಬೇಕಾದಲ್ಲಿ ಈ ಮೇಲಿನ ವ್ಯವಸ್ಥೆಯನ್ನು ಜಾರಿಗೆ ತಂದ

ನಂತರ ಪ್ರತ್ಯೇಕ ಅರ್ಜಿ ಸಲ್ಲಿಸಬೇಕಾಗಿರುವುದಿಲ್ಲ. ಸಂಬಂಧಿಸಿದ ಗ್ರಾಮ ಪಂಚಾಯತ್ ಕಛೇರಿಗೆ ಹೋಗಿ, ಅಲ್ಲಿ ಇರುವ ಕಂಪ್ಯೂಟರ್ ವ್ಯವಸ್ಥೆಗೆ ತಮ್ಮ ಕುಟುಂಬದ ಮಾಹಿತಿಯನ್ನು ದಾಖಲಿಸಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ಗ್ರಾಮ ಪಂಚಾಯಿತಿ ಕಾರ್ಯದರ್ಶಿಯನ್ನು ವಿನಂತಿಸಬೇಕು. ಈ ಬಗ್ಗೆ ``ಪಂಚತಂತ್ರ`` ದಲ್ಲಿ ಸೂಕ್ತ ವ್ಯವಸ್ಥೆ ಮಾಡಲಾಗಿದೆ. ಈ ರೀತಿ ದಾಖಲು ಮಾಡಿದ ಕೂಡಲೇ ಆ ಬಗ್ಗೆ ತಾಲ್ಲೂಕು ಕಚೇರಿಗಳ ಕಂಪ್ಯೂಟರ್‌ನಲ್ಲಿ 'ಸೂಚನೆ' ಕಾಣಿಸಿಕೊಳ್ಳುತ್ತದೆ. ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಈ ರೀತಿ ದಾಖಲಿಸಿದ ಬೇಡಿಕೆಗಳ ಬಗ್ಗೆ ಮಾಹಿತಿಯನ್ನು ಜಿಲ್ಲಾ ಮಟ್ಟದ ಕಛೇರಿಗಳಲ್ಲಿ, ಮತ್ತು ರಾಜ್ಯ ಮಟ್ಟದ ಕಛೇರಿಗಳಲ್ಲಿ ಗಮನಿಸಲು ಸಾಧ್ಯವಾಗುತ್ತದೆ. ಪಡಿತರ ಚೀಟಿಗಳಿಗಾಗಿ ಬೇಡಿಕೆಗಳ ಸಲ್ಲಿಕೆ ಬಗ್ಗೆ ತಾಲ್ಲೂಕು ಕಛೇರಿಯ ಕಂಪ್ಯೂಟರ್‌ನಲ್ಲಿ ಸೂಚನೆ ಕಂಡು ಬಂದ ಕೂಡಲೇ ನಿಗದಿತ ಸಮಯದೊಳಗೆ ಬೇಡಿಕೆ ಸಲ್ಲಿಸಿದ ಕುಟುಂಬದ ಮಾಹಿತಿಯನ್ನು ಸಂಬಂಧಿಸಿದ ಆಹಾರ ನಿರೀಕ್ಷಕರು ಕಂಪ್ಯೂಟರ್‌ನಿಂದ ಮುದ್ರಿಸಿಕೊಳ್ಳುತ್ತಾರೆ. ಅದನ್ನು ತೆಗೆದುಕೊಂಡು ಗ್ರಾಮಕ್ಕೆ ಹೋಗಿ ಬೇಡಿಕೆ ಸಲ್ಲಿಸಿದ ಕುಟುಂಬದ ಮುಖ್ಯಸ್ಥರ ಸಹಿಯನ್ನು ಅದರ ಮೇಲೆ ಪಡೆದು, ತನಿಖೆ ಮಾಡಿ, ತಮ್ಮ ವರದಿಯನ್ನು ಕಂಪ್ಯೂಟರ್‌ಗೆ ಆಹಾರ ನಿರೀಕ್ಷಕರು ದಾಖಲಿಸುತ್ತಾರೆ. ಪಡಿತರ ಚೀಟಿ ಬಯಸಿದ ಕುಟುಂಬದ ಮಾಹಿತಿಯನ್ನು ಕಂಪ್ಯೂಟರ್‌ಗೆ ದಾಖಲಿಸಿದ ಬಾಬ್ತು ₹.10/- ಸಂಭಾವನೆಯನ್ನು ಪಡೆಯಲು ಪಂಚಾಯತ್ ತಾಂತ್ರಿಕ ಸೇವಾ ಸಿಬ್ಬಂದಿ (ಟಿಎಸ್‌ಪಿ) ಅರ್ಹರಿರುತ್ತಾರೆ. ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿದವರು ₹.10/- ಶುಲ್ಕವನ್ನು ಪಂಚಾಯತ್‌ಗೆ ಸಲ್ಲಿಸಿ, ಕಂಪ್ಯೂಟರ್ ಮುದ್ರಿತ ರಶೀದಿಯನ್ನು ಪಡೆಯುವುದು.

ಹೊಸದಾಗಿ ಪಡಿತರ ಚೀಟಿಗಳಿಗಾಗಿ ಅರ್ಜಿ ಸಲ್ಲಿಸುವ ಬಗ್ಗೆ ಸದ್ಯದಲ್ಲಿಯೇ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ ಪ್ರಕಟಣೆ ಹೊರಡಿಸಲಿದೆ. ಈ ರೀತಿ ಪ್ರಕಟಣೆ ಹೊರಡಿಸಿದ ಕೂಡಲೆ, ಪಡಿತರ ಚೀಟಿ ಬಯಸಿದವರ ಮಾಹಿತಿಯನ್ನು ``ಪಂಚತಂತ್ರ`` ವ್ಯವಸ್ಥೆಗೆ ದಾಖಲಿಸಲು ಕ್ರಮಕೈಗೊಳ್ಳಬೇಕು.

**(ಶಾಲಿನಿ ರಜನೀಶ್)**
ಸರ್ಕಾರದ ಕಾರ್ಯದರ್ಶಿ (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಗೆ:

೧) ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್‌ಗಳು,
೨) ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್‌ಗಳು.
೩) ಎಲ್ಲಾ ಗ್ರಾಮ ಪಂಚಾಯಿತಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿಗಳ ಮುಖಾಂತರ.
೪) ಸಂಪಾದಕರು, ಕರ್ನಾಟಕ ವಿಕಾಸ ಪತ್ರಿಕೆ, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ.
೫) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

ಪ್ರತಿ:

ಸರ್ಕಾರದ ಕಾರ್ಯದರ್ಶಿಗಳು, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ವಿಕಾಸ ಸೌಧ, ಬೆಂಗಳೂರು, ಇವರಿಗೆ ಮಾಹಿತಿಗಾಗಿ.